IV. **ಶ್ರೀ ಹೆಚ್.ಎಂ. ರೇವಣ್ಣ (ಕೃಷಿ ಮಂತ್ರಿ) :-** ಮಾನ್ಯ ಅಧ್ಯಕ್ಷರೆ,

1963ರ ಕೃಷಿ ವಿಶ್ವವಿದ್ಯಾನಿಲಯಗಳ ಕಾಯ್ದೆಯ 38(3)ನೇ ಕಲಮಿನ ಮೇರೆಗೆ,

1992-93ನೇ ಸಾಲಿನ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಲೆಕ್ಕಪರಿಶೋಧನಾ ವರದಿ ಮತ್ತು ಉತ್ತರಗಳನ್ನು ಮಂಡಿಸುತ್ತೇನೆ.

2. ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ, ಕ.ವಿ. ಮಂಡಲ :- ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ ಒಪ್ಪಿಸಿದ ವರದಿಯ ನಂತರ, ರಾಜ್ಯಪಾಲರಿಂದ ಅಥವಾ ರಾಷ್ಟ್ರಾಧ್ಯಕ್ಷರಿಂದ ಸಂದರ್ಭಾನುಸಾರವಾಗಿ ಒಪ್ಪಿಗೆಯನ್ನು ಪಡೆದಿರತಕ್ಕ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೆನೆ.

ಕ್ರಮ ಸಂಖ್ಯೆ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದವರು
1.	ಯೋಜನೆಯಿಂದಾಗಿ ಸ್ಥಳಾಂತರಿತ ವ್ಯಕ್ತಿಗಳ ಪುನರ್ವ್ಯವಸ್ಥೆಯ ಕರ್ನಾಟಕ ವಿಧೇಯಕ, 1987	12-12-1993	ರಾಷ್ಟ್ರಪತಿಯವರು
2.	ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕ, 1990	28-07-1994	ರಾಷ್ಟ್ರಪತಿಯವರು

3. **ಶಾಸನ ರಚನೆ**

ಅ. ವಿಧೇಯಕವನ್ನು ಮಂಡಿಸುವುದು :

1994ರ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಚೌಡರೆಡ್ಡಿ (ಗೃಹಮಂತ್ರಿ) :- ಸನ್ಮಾನ್ಯ ಅಧ್ಯಕ್ಷರೇ, 1994ನೇ ಸಾಲಿನ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾಪ ಏನೆಂದರೆ,'' 1994ನೇ ಸಾಲಿನ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು. ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ತಾವು ಇದನ್ನು ವಿಶೇಷ ಅಧಿವೇಶನ ಎಂದು ಕರೆದು, ಇವೆಲ್ಲವನ್ನೂ ಮಾಡಬಹುದೇ? ವಿಶೇಷ ಅಧಿವೇಶನ ಯಾವುದಕ್ಕೋಸ್ಕರ ಮೀಸಲಾಗಿತ್ತೋ ಅದನ್ನು ಮಾಡಬೇಕೇ ಅಥವಾ ಬೇರೆ ಯಾವುದಾದರೂ ಮಾಡಬಹುದೇ?

ಅಧ್ಯಕ್ಷರು:- ಈಗ ಅದನ್ನೂ ತೆಗೆದುಕೊಳ್ಳುತ್ತೇನೆ.

ಶ್ರೀ ಚೌಡರೆಡ್ಡಿ (ಗೃಹಮಂತ್ರಿ):- ಮಾನ್ಯ ಅಧ್ಯಕ್ಷರೇ, 1994ರ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:- ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ I

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್ ಅವರು ಕೇಳಿದ ಪ್ರಶ್ನೆಗೆ ತಾವು ಏನಾದರೊಂದು ತೀರ್ಮಾನ ಕೊಡಬೇಕಾಗುತ್ತದೆ. ಇಲ್ಲದೇಹೋದರೆ, ಬೇರೆಯವರು ಹೊರಗಡೆ ಹೋದಹಾಗೆ, ನಾವು ಹೋಗುತ್ತೇವೆ. ಅವರು ಈಗಾಗಲೇ ಒಂದು ಮಾತು ಹೇಳಿದರು. ನಾನೂ ಅದನ್ನೇ ಸ್ಪಷ್ಟೀಕರಿಸುವುದಕ್ಕೆ ಇಚ್ಛೆಪಡುತ್ತೇನೆ. ಈ ಅಧಿವೇಶನ ವಿಶೇಷ ಅಧಿವೇಶನ. ಈ ವಿಶೇಷ ಅಧಿವೇಶನವನ್ನು ಕರೆದಿರುವಂಥಾದ್ದು, ಒಂದು ವಿಶೇಷ ವಿಷಯದ ಚರ್ಚೆಗಾಗಿ, ಸೀಮಿತವಾದ ಉದ್ದೇಶದಿಂದ ಕರೆಯಲಾಗಿದೆ. ಅಂತಹ ಸಂದರ್ಭದಲ್ಲಿ ಆ ಉದ್ದೇಶವನ್ನು ಬಿಟ್ಟು, ಸದನದಲ್ಲಿ ಬೇರೆ ಕಾರ್ಯಕಲಾಪಗಳನ್ನು ಮಾಡುವುದಕ್ಕೆ ಸಾಧ್ಯವೇ ಅಥವಾ ಇಲ್ಲವೇ ಎನ್ನುವುದರ ಬಗ್ಗೆ ತಾವು ರೂಲಿಂಗ್ ಕೊಟ್ಟು, ಮುಂದುವರಿಸಬಹುದು.

ಅಧ್ಯಕ್ಷರು:- ನಾನು ಈಗಾಗಲೇ ಹೇಳಿದ್ದೇನೆ. ಈಗ ಅದನ್ನೂ ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ತಮ್ಮ ಸಲಹೆ ಮತ್ತು ಅಭಿಪ್ರಾಯವನ್ನು ಕೇಳುತ್ತಿದ್ದೇವೆ. ತಾವು ಯಾವರೀತಿ ಸದನವನ್ನು ನಡೆಸಿದರೂ ನಮ್ಮದೇನೂ ಅಭ್ಯಂತರವಿಲ್ಲ. ಇದನ್ನು ತಾವು ವಿಶೇಷ ಅಧಿವೇಶನ ಎಂದು ಕರೆದಿದ್ದೀರಿ. ಈ ಮಸೂದೆಯಾದ ನಂತರ, ಇನ್ನೂ 3-4 ವಿಚಾರಗಳನ್ನು ಚರ್ಚೆ ಮಾಡಬೇಕಾಗಿದೆ, ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಅವುಗಳನ್ನು ಚರ್ಚೆ ಮಾಡುವುದಕ್ಕೂ ಅವಕಾಶ ಕೊಡಬೇಕು.

ಅಧ್ಯಕ್ಷರು:- ಆಯಿತು, ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:- ಅಂದರೆ, ಈ ಅಧಿವೇಶನದಲ್ಲಿ ವಿಶೇಷ ವಿಷಯವನ್ನು ಬಿಟ್ಟು, ಬೇರೆ ವಿಷಯವನ್ನೂ ಚರ್ಚೆ ಮಾಡಲು ತಮ್ಮ ಅಪ್ಪಣೆ ಇದೆಯೆಂದು ಭಾವಿಸಿಕೊಳ್ಳಬಹುದೇ?

ಅಧ್ಯಕ್ಷರು:- ಇದನ್ನು ಬಿಟ್ಟು ಎಂದಲ್ಲ. ಇದನ್ನೂ ತಕ್ಷಣ ತೆಗೆದುಕೊಳ್ಳುತ್ತೇನೆ.

ಶ್ರೀ ವೈ.ಕೆ.ರಾಮಯ್ಯ:- ಅಂದರೆ, ಬೇರೆ ವಿಷಯವನ್ನು ತೆಗೆದುಕೊಳ್ಳಲು ಅವಕಾಶವಿದೆ ಎಂದು ಭಾವಿಸಿಕೊಳ್ಳಬಹುದೇ?

ಅಧ್ಯಕ್ಷರು:- ಹೌದು.